ಒ.ಎಸ್. ನಂ.35/2017
ಡಿಡಬ್ಲು-1

ದಿನಾಂಕ 20.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ

ನಾನು ಈ ಪ್ರಕರಣದ ಬಗ್ಗೆ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನಾನು ದಾವಾ ಸ್ಥಳಕ್ಕೆ ಭೇಟಿ ನೀಡಿದ್ದು ಆದರೆ ನಾನು ಯಾರಿಗೂ ನೋಟಿಸು ನೀಡಿಲ್ಲ. ದಾವಾ ಸ್ವತ್ತು ಒಟ್ಟು 09-ಎಕರೆ 39-ಗುಂಟೆ ಇದ್ದು ಅದರಲ್ಲಿ 08-ಎಕರೆ 19-ಗುಂಟೆ ಗಿಡಗಂಟೆಗಳು ಬೆಳೆದಿರುತ್ತವೆ. ಉಳಿದ ಜಾಗದಲ್ಲಿ ವಾದಿಯು 01-ಎಕರೆ ಜಮೀನಿನಲ್ಲಿ ಪ್ಲಾಟುಗಳು ಮಾಡಿರುತ್ತಾನೆ ಅದರಲ್ಲಿ ಮನೆಗಳಿರುತ್ತವೆ. ಇನ್ನುಳಿದ 20 ಗುಂಟೆ ಜಮೀನಿನಲ್ಲಿ ವಾದಿ ಮನೆ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾನೆ. 01-ಎಕರೆ ಜಮೀನಿನಲ್ಲಿ ಪ್ಲಾಟುಗಳು ಮಾಡಿ ಮಾರಾಟ ಮಾಡಿದ್ದು ಅದರಲ್ಲಿ ಮನೆಗಳು ನಿರ್ಮಾಣವಾಗಿದ್ದು ಆ ಬಗ್ಗೆ ಕಾನೂನು ಕ್ರಮ ಕೈಗೊಂಡಿಲ್ಲ. ಒತ್ತುವರಿಯಾಗಿದೆ ಎಂದು ನನಗೆ ಕಂದಾಯ ನಿರೀಕ್ಷಕರ ಮುಖಾಂತರ ನನಗೆ ಗೊತ್ತಾಗಿರುತ್ತದೆ. ವಾದಿ ಒತ್ತುವರಿ ಮಾಡಿದ ಬಗ್ಗೆ ನನಗೆ ಕಂದಾಯ ನಿರೀಕ್ಷಕರು ನನಗೆ ಫೆಬ್ರುವರಿ 2017 ರಲ್ಲಿ ತಿಳಿಸಿರುತ್ತಾರೆ. ವಾದಿಯು 20 ಗುಂಟೆ ಜಮೀನು ಅತಿಕ್ರಮ ಮಾಡಿದ ಬಗ್ಗೆ ಕಂದಾಯ ನಿರೀಕ್ಷಕರು ನನಗೆ ತಿಳಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಲ್ಲಿಸಿದ ವರದಿಯನ್ನು ಈಗಾಗಲೇ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಕೆಲವು ದಾಖಲೆಗಳನ್ನು ತೋರಿಸಲಾಗಿ ಕಂದಾಯ ನಿರೀಕ್ಷಕರು ಸಲ್ಲಿಸಿದ ವರದಿಯನ್ನು ತೋರಿಸಲು ಕೇಳಿದಾಗ ಸದರಿ ವರದಿ ಇರುವುದಿಲ್ಲ ಎಂದು ನುಡಿಯುತ್ತಾರೆ.

01-ಎಕರೆ ಜಮೀನಿನಲ್ಲಿ ಪ್ಲಾಟುಗಳು ಮಾಡಿ ಮಾರಾಟ ಮಾಡಿದ್ದು ಅದರಲ್ಲಿ ಮನಗಳು ಕಟ್ಟಿದ ಮಾಲಿಕರಿಗೆ ನೋಟಿಸು ನೀಡಿದ್ದೀರಾ ಎಂದರೆ ನನಗೆ ಈ ಬಗ್ಗೆ ಮಾಹಿತಿ ಇರುವುದಿಲ್ಲ.

ವಾದಿಗೆ show cause ನೋಟಿಸು ನೀಡಿದ್ದಿರಾ ಎಂದರೆ ಸಾಕ್ಷಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಗೆ show cause ನೋಟಿಸು ಮುಂಚೆ ದಾವಾ

ಸ್ವತ್ತನ್ನು ಅಳತೆ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಆದರೆ ಅಳತೆ ಮಾಡಿದ ಬಗ್ಗೆ ದಿನಾಂಕ ನನಗೆ ಗೊತ್ತಿಲ್ಲ.

ಶರಣಪ್ಪ ಸರನಾಳ ಮತ್ತು ದಲಿತ ಸಂಘರ್ಷ ಸಮಿತಿಯಿಂದ ಜೂನ್-2017 ರಂದು ದೂರು ಬಂದಿರುತ್ತದೆ. ಶರಣಪ್ಪ ಸರನಾಳ ಮತ್ತು ದಲಿತ ಸಂಘರ್ಷ ಸಮಿತಿಯಿಂದ ವಾದಿ ಜಮೀನು ಒತ್ತುವರಿ ಮಾಡಿರುತ್ತಾರೆ ಎಂದು ದೂರು ಬಂದಿರುತ್ತದೆ. ಸದರಿ ದೂರು ನನ್ನ ಹತ್ತಿರ ಇವೆ. ನಿಡಿ-1 ದಿನಾಂಕ 08.02.2017 ರ ವರದಿಯಲ್ಲಿ ಬರೆದ ವಿಚಾರಗಳು ಸರಿ ಇವೆ. ನಿಡಿ-1 ಮೊದಲು ನೋಟಿಸು ಇದೆ ಎಂದರೆ ಸರಿ. ನಿಡಿ-1 ರ ನೋಟಿಸು ನಾನು ವಾದಿಗೆ ಕೊಟ್ಟಿರುವುದಿಲ್ಲ. ವಾದಿಗೆ ನೋಟಿಸು ನೀಡಿದ ಎಷ್ಟು ದಿನಗಳ ನಂತರ ದಾವಾ ಸ್ವತ್ತು ಅಳತೆ ಮಾಡಿಸಿದ್ದೀರಿ ಎಂದರೆ ಸಾಕ್ಷಿ ಜೂನ್-2017 ರಲ್ಲಿ ಅಳತೆ ಮಾಡಿರುತ್ತೇವೆ ಆದರೆ ನಿಖರವಾಗಿ ದಿನಾಂಕ ಗೊತ್ತಿಲ್ಲ. ಅಳತೆ ಮಾಡುವ ಸಮಯದಲ್ಲಿ ಪಂಚನಾಮೆ ಮಾಡಿರುತ್ತಾರೆ ಸದರಿ ಜೂನ್-2017 ರಲ್ಲಿ ಅಳತೆ ಮಾಡಿದ ಬಗ್ಗೆ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸಾಕ್ಷಿಗೆ ಜೂನ್-2017 ರಲ್ಲಿ ಅಳತೆ ಮಾಡಿದ ಬಗ್ಗೆ ಪಂಚನಾಮೆಯನ್ನು ತೋರಿಸಲು ಕೇಳಿದಾಗ ಸದರಿ ಪಂಚನಾಮೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

ನಿಡಿ-3 ರಲ್ಲಿ ಸರ್ವೆ ನಂ.92 ಕ್ಷೇತ್ರ 08-ಎಕರೆ 19-ಗುಂಟೆ ಎಂದು ನಮೂದಾಗಿದ್ದು ಸರಿ ಇದೆ. ನಿಡಿ-3 ರಲ್ಲಿ ರೋಮನ ನಂ.1 ರಲ್ಲಿ ಮನೆಗಳು, ರಸ್ತೆ ಮತ್ತು ಸ.ಹಿ.ಪ್ರಾ. ಶಾಲೆಗಳು ಇವೆ ಎಂದರೆ ಸರಿ. ನಿಡಿ-3 ರಲ್ಲಿನ ರೋಮನ ನಂ.2 ರಲ್ಲಿ ವಾದಿಯ ಮನೆ ಮತ್ತು ಸಾಗುವಳಿ ಮಾಡುತ್ತಿದ್ದಾನೆ ಎಂದು ಯಾವ ಆಧಾರದ ಮೇಲೆ ಬರೆದಿರುತ್ತಾರೆ ಎಂದರೆ ಸಾಕ್ಷಿ ತಾಲೂಕ ಸರ್ವೆಯರ ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-3 ರೋಮನ ನಂ.2 ರಲ್ಲಿ ಅಳತೆ ಮಾಡಿದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ನಿಡಿ-3 ದಾಖಲೆಯೊಂದಿಗೆ ಕವರಿಂಗ್ ಲೆಟರ ಮತ್ತು ಪಂಚನಾಮೆ ಲಗತ್ತಿಸಿಲ್ಲ ಎಂದರೆ ಸಾಕ್ಷಿ ಪಂಚನಾಮೆ ಲಗತ್ತಿಸಿರುತ್ತದೆ ಆದರೆ ಕವರಿಂಗ್ ಲೆಟರ ಲಗತ್ತಿಸಿಲ್ಲ ಎಂದು ನುಡಿಯುತ್ತಾರೆ.

<u>ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ